**Code No. 20 Y**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ದ್ವಿತೀಯ ಪತ್ರಿಕೆ

## (ಸೂತ್ರಗಳು)

ಜನವರಿ, 2016

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

1. ಶೀಘ್ರಲಿಪಿಯಲ್ಲಿ ಅಧೋಮುಖ ಮತ್ತು ಊರ್ಧ್ವಮುಖ "ರ" ರೇಖಾಕ್ಷರಗಳ ಸೂತ್ರವನ್ನು ಉದಾಹರಣೆಯೊಂದಿಗೆ ವಿವರಿಸಿ. 10

2. ಶೀಘ್ರಲಿಪಿಯಲ್ಲಿ "ಹ" ಪ್ರಯೋಗವನ್ನು ಉದಾಹರಣೆಯೊಂದಿಗೆ ವಿವರಿಸಿ. 10

3. ಯಾವುದಾದರೂ 10 ಅಂತ್ಯಸರ್ಗಗಳ ಉಪಯೋಗವನ್ನು ಸಂಕ್ಷೇಪವಾಗಿ ಬರೆಯಿರಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : $4 \times 5 = 20$

   ಅ) ರೇಖಾಕ್ಷರಗಳ ಸಂಯೋಜನಾ ಸೂತ್ರ

   ಆ) ಎಡರೂಪ 'ತ' ಮತ್ತು 'ದ'

   ಇ) ಸಣ್ಣ ಕುಣಿಕೆ

   ಈ) ಸಂಖ್ಯೆಗಳು ಮತ್ತು ಧನಸೂತಕ ಚಿಹ್ನೆ

   ಉ) ಆದಿಕೊಕ್ಕೆಗಳಿಗೆ ಸಣ್ಣ ವೃತ್ತ

5. ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪದಗಳಿಗೆ ಸಂಕ್ಷೇಪಣೆ ಬರೆಯಿರಿ : $5 \times 1 = 5$

   ಅ) ದೈವ ಸಂಕಲ್ಪ

   ಆ) ಮಂತ್ರ ಮಂಡಲ

   ಇ) ಪಂಚವಾರ್ಷಿಕ ಯೋಜನೆ

   ಈ) ಉದ್ಧಟತನ

   ಉ) ಅಂಗವಿಕಲ

   ಊ) ನಿರಕ್ಷರಕುಕ್ಷಿ

6. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಛೇದಿಸುವಿಕೆ ಪದಗಳನ್ನು ಬರೆಯಿರಿ : 5 × 1 = 5

ಅ) ಇಲಾಖಾ ನೇಮಕ ಸಮಿತಿ

ಆ) ಅಂತರರಾಷ್ಟ್ರೀಯ ಭಾಷೆ

ಇ) ಆಮದು ರಫ್ತು

ಈ) ಕನ್ನಡ ಚಳುವಳಿಗಾರರು

ಉ) ಲಂಚ ರುಷುವತ್ತು

ಊ) ಪುಂಖಾನುಪುಂಖವಾಗಿ

7. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಪದಗಳ ಸಮೂಹಗಳನ್ನು ಬರೆಯಿರಿ : 5 × 1 = 5

ಅ) ಅತ್ಯಂತ ವಿಷಾದಕರ

ಆ) ಕಾನೂನು ಕಟ್ಟಳೆ

ಇ) ಈ ರೀತಿಯಾದರೂ ಸರಿ

ಈ) ಏಕಸದಸ್ಯ ಆಯೋಗ

ಉ) ಕನ್ನಡ ಪ್ರದೇಶ

ಊ) ಒಂದಾವರ್ತಿ

8. ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ : 5 × 1 = 5

ಅ) ರೇಖಾಕ್ಷರದ ಆದಿಯಲ್ಲಿ ಎಡದಿಂದ ಬಲಕ್ಕೆ ಸಣ್ಣ ಕೊಕ್ಕೆಯನ್ನು ಸೇರಿಸುವುದರಿಂದ ..................... ಸಂಯೋಗವನ್ನು ಸೂಚಿಸುತ್ತದೆ.

ಆ) ರೇಖಾಕ್ಷರದ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಇ, ಈ ಮತ್ತು ಎ, ಏ ಸ್ವರಗಳನ್ನು ......................ಯಿಂದ ಸೂಚಿಸಬಹುದು.

ಇ) ವರ್ಣ ಪದಗಳ ಸಂಕ್ಷಿಪ್ತ ಲಿಪಿಯ ರೂಪಕ್ಕೆ ...................... ಎಂದು ಹೆಸರು.

ಈ) 'ಣ' ರೇಖಾಕ್ಷರವನ್ನು ಮಧ್ಯದಲ್ಲಿ ಒಂದು ತೆಳ್ಳನೆಯ ಗೆರೆಯಿಂದ ಛೇದಿಸಿದರೆ ...................... ಸಂಯುಕ್ತ ವ್ಯಂಜನವಾಗುತ್ತದೆ.

ಉ) ರೇಖಾಕ್ಷರದ ಅಂತ್ಯದಲ್ಲಿ ಅರ್ಧಮಾಡಿದ ಊರ್ಧ್ವಮುಖದ 'ರ' ರೇಖಾಕ್ಷರವನ್ನು ಬರೆದರೆ ......................ನ್ನು ಸೂಚಿಸುತ್ತದೆ.

9. ಈ ಕಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಮಾನ್ಯರೆ,

ಕರ್ನಾಟಕ ಸರ್ಕಾರ ಕನ್ನಡವನ್ನು ಕಡ್ಡಾಯ ಆಡಳಿತ ಭಾಷೆ ಎಂದು ಘೋಷಿಸಿರುವುದರಿಂದ ನಮ್ಮ ಇಲಾಖೆಯ ಎಲ್ಲಾ ವ್ಯವಹಾರಗಳನ್ನು ಇನ್ನು ಮುಂದೆ ಕನ್ನಡದಲ್ಲೇ ನಡೆಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಸರ್ಕಾರಿ ಆಜ್ಞೆ ಆದಮೇಲೂ ನಾವು ನಮ್ಮ ವ್ಯವಹಾರಗಳನ್ನು ಆಂಗ್ಲ ಭಾಷೆಯಲ್ಲಿ ನಡೆಸಿದರೆ ಅದು ಸರ್ಕಾರಿ ಆಜ್ಞೆಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ ಎಂಬುದು ನಮ್ಮ ನಂಬಿಕೆ.

ನಾನು ನನ್ನ ಕೈಕೆಳಗಿನ ಎಲ್ಲಾ ಅಧಿಕಾರಿಗಳಿಗೆ ಕನ್ನಡದಲ್ಲೇ ವ್ಯವಹರಿಸಬೇಕೆಂದು ಕಟ್ಟಾಜ್ಞೆ ಮಾಡಿದಾಗ ಅವರು ಆಂಗ್ಲ ಭಾಷಾ ಪದಗಳಿಗೆ ಸರಿಸಮಾನವಾದ ಪದಗಳು ಕನ್ನಡದಲ್ಲಿ ಗೆತ್ತಿಲ್ಲದಿರುವುದು ನಮಗೆ ಕಷ್ಟವಾಗಿದೆಯೆಂದೂ, ಅದಕ್ಕಾಗಿ ಏನಾದರೂ ಸೂಕ್ತ ವ್ಯವಸ್ಥೆ ಮಾಡಬೇಕೆಂದೂ ಮನವಿ ಸಲ್ಲಿಸಿದರು. ಆದ್ದರಿಂದ ತಾವು ದಯವಿಟ್ಟು ಕನ್ನಡದಲ್ಲಿ ಆಡಳಿತ ನಡೆಸಲುಬೇಕಾದ ಎಲ್ಲಾ ಪುಸ್ತಕಗಳನ್ನು ನಮ್ಮ ಕಛೇರಿಗೆ ಕೂಡಲೇ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ರಾಜ್ಯದಲ್ಲಿರುವ ನಮ್ಮ ಇಲಾಖೆಯ ಎಲ್ಲಾ ಕಛೇರಿಗಳಿಗೂ ಪುಸ್ತಕಗಳನ್ನು ಕಳುಹಿಸಬೇಕಾಗಿರುವುದರಿಂದ ಪ್ರತಿಯೊಂದು ಪುಸ್ತಕಗಳನ್ನು ತಲಾ ಐವತ್ತು ಪ್ರತಿಗಳಂತೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದವರು ತಯಾರಿಸಿರುವ ಇಂಗ್ಲಿಷ್–ಕನ್ನಡ ನಿಘಂಟನ್ನು, ಕನ್ನಡ ಸಾಹಿತ್ಯ ಪರಿಷತ್ತಿನವರು ತಯಾರಿಸಿರುವ ಕನ್ನಡ–ಕನ್ನಡ ನಿಘಂಟನ್ನು ತಲಾ ಐವತ್ತು ಪ್ರತಿಗಳಂತೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ. ಕೊನೆಯದಾಗಿ ಮತ್ತೊಂದು ಮನವಿ, ತಮ್ಮ ಇಲಾಖೆಯಿಂದ ಅಧಿಕಾರಿಗಳನ್ನು ನಮ್ಮ ಇಲಾಖೆಗೆ ಕಳುಹಿಸಿಕೊಟ್ಟು ಕನ್ನಡದಲ್ಲಿ ಆಡಳಿತ ನಡೆಸುವ ಬಗ್ಗೆ ನಮ್ಮ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.